**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

## Spl.C. No.485/2024

ದೋ.ಸಾ. 1

ಫ್ರಾ.ಸಾ. 1

ಪ್ರ.ವ.ಬೊ.ದಿನಾಂಕ. 10-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಚೈತ್ರ |
| ತಂದೆ / ಗಂಡನ ಹೆಸರು | - | ಶಿವರಾಜ್ |
| ವಯಸ್ಸು | - | 28 |
| ಉದ್ಯೋಗ | - | ದ್ವಿತೀಯ ದರ್ಜೆ ಸಹಾಯಕಿ, ಕೆಜಿಐಡಿ ಕಛೇರಿ, ಚಿತ್ರದುರ್ಗ |
| ವಾಸ ಸ್ಥಳ | - | ಚಿತ್ರದುರ್ಗ |

ಮುಖ್ಯ ವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ.

1. ಚಾ.ಸಾ.4 ಚಂದಮ್ಮ ನನಗೆ ಅತ್ತೆಯಾಗಬೇಕು. ನನಗೆ ಚಾ.ಸಾ.5 ನಿಂಗರಾಜು, ಚಾ.ಸಾ.13 ಭರತ್, ಚಾ.ಸಾ.14 ಮಂಜುನಾಥ, ಚಾ.ಸಾ.15 ಬಂಗಾರಪ್ಪ ಹಾಗೂ ಚಾ.ಸಾ.16 ಪ್ರದೀಪ ಮತ್ತು ಚಾ.ಸಾ.17 ಸಂತೋಷರವರ ಪರಿಚಯ ಇರುತ್ತದೆ. ಚಾ.ಸಾ.16 ಪ್ರದೀಪ ಈ ಹಂತದಲ್ಲಿ ತೀರಿಕೊಂಡಿರುತ್ತಾರೆ. ನಾನು ಮತ್ತು ನನ್ನ ಗಂಡ ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಹಾಗೂ ವಿಸಿಯಲ್ಲಿ ಕಾಣಿಸುತ್ತಿರುವ 2 ನೇ ಆರೋಪಿತನ ಪರಿಚಯ ಇರುತ್ತದೆ. ಆರೋಪಿತರು ಕೊರಮ ಹಾಗೂ ಕುರುಬ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ನಾವು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿರುವ ವಿಚಾರ ಆರೋಪಿತರಿಗೆ ತಿಳಿದಿರುತ್ತದೆ.

2. ನಮ್ಮ ಊರಿನ ಪಕ್ಕದಲ್ಲಿ ತುಂಗಭದ್ರಾ ನದಿ ಹರಿಯುತ್ತಿದ್ದು, ಅದರಲ್ಲಿ ಪ್ರತಿವರ್ಷ ಮರಳು ಶೇಖರಣೆಯಾಗುತ್ತದೆ. 1 ಮತ್ತು 2 ನೇ ಆರೋಪಿತರು ಅಕ್ರಮ ಮರಳು ಸಾಗಾಣಿಕೆ ಮಾಡುತ್ತಾ ಬಂದಿರುತ್ತಾರೆ. ದಿಃ 18-09-2024 ರಂದು ಬೆಳಿಗ್ಗೆ 9-30 ಯಿಂದ 10-00 ಗಂಟೆ ಸಮಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಮರಿಗೊಂಡನಹಳ್ಳಿ ಗ್ರಾಮಕ್ಕೆ ಅಕ್ರಮ ಮರಳು ಸಾಗಾಣಿಕೆಯ ಕುರಿತು ಪರಿಶೀಲನೆಗಾಗಿ ಬಂದಿದ್ದು, ಸದರಿ ಅಧಿಕಾರಿಗಳಿಗೆ ನನ್ನ ಗಂಡ ಶಿವರಾಜ ಮಾಹಿತಿ ನೀಡಿರುತ್ತಾನೆ ಎಂದು 1 ಮತ್ತು 2 ನೇ ಆರೋಪಿತರು ಸಂಶಯ ಮಾಡಿರುತ್ತಾರೆ.

3. ದಿಃ 18-09-2024 ರಂದು ಬೆಳಗಿನ ಸಮಯದಲ್ಲಿ ನನ್ನ ಗಂಡ ಬೇರೆಯವರ ತೋಟಕ್ಕೆ ಕೆಲಸಕ್ಕೆ ಹೋಗಿದ್ದು, ನಂತರ ಮದ್ಯಾಹ್ನ 1-30 ಗಂಟೆ ಸಮಯದಲ್ಲಿ ಬಂದಿರುತ್ತಾರೆ. ಆ ರೀತಿ ಬಂದ ನನ್ನ ಗಂಡ ಮನೆಯಲ್ಲಿ ಊಟ ಮಾಡುತ್ತಿದ್ದರು. ಆ ಸಮಯದಲ್ಲಿ ಕಡದಕಟ್ಟೆ ಗ್ರಾಮದ ಕೆಲವು ಜನ 15 ರಿಂದ 20 ಬೈಕುಗಳಲ್ಲಿ ಬಂದವರು ನಮ್ಮ ಮನೆಯ ಒಳಗಡೆ ಅಕ್ರಮ ಪ್ರವೇಶ ಮಾಡಿರುತ್ತಾರೆ. ಆ ರೀತಿ ಬಂದವರು ನನ್ನ ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈದು, ಜಾತಿ ನಿಂದನೆ ಮಾಡಿರುತ್ತಾರೆ. ಅಲ್ಲದೇ ಅವರು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ನೀನೇ ಮಾಹಿತಿ ಕೊಟ್ಟಿದ್ದೀಯಾ ಎಂದು ಪ್ರಶ್ನಿಸಿರುತ್ತಾರೆ. ನಂತರ ಸದರಿಯವರು ನನ್ನ ಗಂಡನಿಗೆ ಹಲ್ಲೆ ಮಾಡಿ ಮನೆಯಿಂದ ಹೊರಗಡೆ ಎಳೆದುಕೊಂಡು ಹೋಗಿರುತ್ತಾರೆ. ಆ ರೀತಿಯಾಗಿ ನನ್ನ ಗಂಡನನ್ನು ನನ್ನ ಮನೆಯಿಂದ ಸುಮಾರು 100 ಮೀಟರ್ ಗಳಷ್ಟು ದೂರ ಎಳೆದುಕೊಂಡು ಹೋಗಿದ್ದು, ಆಗ ನಾನು ಕೇರಿಯ ಜನರನ್ನು ಕರೆದಿರುವುದಲ್ಲದೇ ನನ್ನ ಗಂಡನನ್ನು ಅವರಿಂದ ಬಿಡಿಸಲು ಕೂಡ ಹೋಗಿರುತ್ತೇನೆ.

4. ಆ ರೀತಿ ಬಿಡಿಸಲು ಹೋದಾಗ ಸದರಿ ವ್ಯಕ್ತಿಗಳು ನನಗೂ ಅವಾಚ್ಯ ಶಬ್ದಗಳಿಂದ ಬೈದು, ಕಾಲಿನಿಂದ ಹಲ್ಲೆ ಮಾಡಿರುತ್ತಾರೆ. ಆ ರೀತಿಯಾಗಿ ನನ್ನ ಗಂಡನನ್ನು ಮನೆಯಿಂದ ಎಳೆದುಕೊಂಡು ಹೋದವರು ಹಾಗೂ ನನಗೆ ಬೈದು, ಕಾಲಿನಿಂದ ಹಲ್ಲೆ ಮಾಡಿದವರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಹಾಗೂ ವಿಸಿಯಲ್ಲಿ ಕಾಣುವ ಆರೋಪಿಯಾಗಿರುತ್ತಾನೆ. ಅಲ್ಲದೇ ಆ ಸಮಯದಲ್ಲಿ ನನಗೆ ಆರೋಪಿತರು ತಳ್ಳಿದ್ದು, ಅಲ್ಲದೇ 2 ನೇ ಆರೋಪಿಯು ನನ್ನ ಗಂಡನನ್ನು ಕೊಲೆ ಮಾಡಬೇಕು ಎನ್ನುವ ಕಾರಣದಿಂದ ಆತ ಅದಾಗಲೇ ತಂದ ಚಾಕುವಿನಿಂದ ನನ್ನ ಗಂಡನ ಎದೆಯ ಎಡಭಾಗಕ್ಕೆ ಚುಚ್ಚಿರುತ್ತಾನೆ. ಆ ಸಮಯದಲ್ಲಿ ನನ್ನ ಗಂಡ ಅವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದು, ಆ ಸಂದರ್ಭದಲ್ಲಿ 1 ನೇ ಆರೋಪಿಯು ನನ್ನ ಗಂಡನನ್ನು ತಬ್ಬಿ ಹಿಡಿದುಕೊಂಡಿರುತ್ತಾರೆ. ನನ್ನ ಗಂಡನ ಎಡಬದಿಯ ತೋಳಿನ ಮೇಲೆ 1 ನೇ ಆರೋಪಿಯು ಕಚ್ಚಿರುತ್ತಾನೆ.

5. ನಂತರ ನಮ್ಮ ಕೇರಿಯ ಜನ ಅಲ್ಲಿಗೆ ಬರುವುದನ್ನು ನೋಡಿ 2 ನೇ ಆರೋಪಿಯು ತಾನು ತಂದಿದ್ದ ಚಾಕುವನ್ನು ಅಲ್ಲಿಯೇ ಬಿಸಾಡಿದ್ದಲ್ಲದೇ, 10 ನೇ ಆರೋಪಿಯು ತನ್ನ ಚಪ್ಪಲಿಯನ್ನು ಅಲ್ಲಿಯೇ ಬಿಸಾಡಿ ಎಲ್ಲರೂ ಓಡಿಹೋಗಿರುತ್ತಾರೆ. ಅಲ್ಲದೇ ಆ ರೀತಿ ಬಂದವರು ಗಾಬರಿಯಲ್ಲಿ ಎರಡು ಬೈಕುಗಳನ್ನು ಕೂಡ ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾರೆ. ಆ ಸಮಯದಲ್ಲಿ ಗಲಾಟೆ ಬಿಡಿಸಲು ಬಂದಿದ್ದ ಚಾ.ಸಾ.13 ಭರತನಿಗೂ ಕೂಡ 2 ನೇ ಆರೋಪಿಯು ಆತನ ಬೆನ್ನಿನ ಹಿಂದೆ ಚಾಕುವಿನಿಂದ ಚುಚ್ಚಿರುತ್ತಾನೆ. ಆ ಕಾರಣ ಆತನ ಬೆನ್ನಿನ ಹಿಂದೆ ಗಾಯವಾಗಿರುತ್ತದೆ.

6. ನನ್ನ ಗಂಡನ ಎಡಎದೆಗೆ ಚಾಕುವಿನಿಂದ ಚುಚ್ಚಿದ ಕಾರಣ ಮುಕ್ಕಾಲು ಇಂಚಿನಷ್ಟು ಗಾಯವಾಗಿ ಅದರಿಂದ ರಕ್ತ ಸ್ರಾವವಾಗಿರುತ್ತದೆ. ನಂತರ ನನ್ನ ಗಂಡನನ್ನು ಓಮಿನಿ ವಾಹನದ ಮೂಲಕ ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಂದರೆ ನಾನು, ಚಾ.ಸಾ.15 ರಿಂದ 17 ರವರು ಓಮಿನಿಯಲ್ಲಿ ನನ್ನ ಗಂಡನನ್ನು

ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ವೈದ್ಯರು ನನ್ನ ಗಂಡನನ್ನು ಪರೀಕ್ಷಿಸಿ ಅದಾಗಲೇ ನನ್ನ ಗಂಡ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ.

7. ನಂತರ ಅದೇ ದಿನ 8-45 ಗಂಟೆ ಸಮಯದಲ್ಲಿ ನ್ಯಾಮತಿ ಪೊಲೀಸ್ ಠಾಣೆಗೆ ಹೋಗಿ ನಾನೇ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ಮತ್ತು ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

8. ಮರುದಿನ ನನ್ನ ಗಂಡನ ಶವಪರೀಕ್ಷೆ ಮುಗಿದ ಬಳಿಕ ಶವ ಸಂಸ್ಕಾರಕ್ಕಾಗಿ ಶವವನ್ನು ನಮಗೆ ನೀಡಲಾಗಿದ್ದು, ಮರಿಗೊಂಡನಹಳ್ಳಿಯಲ್ಲಿ ನನ್ನ ಗಂಡನ ಶವ ಸಂಸ್ಕಾರ ಮಾಡಿರುತ್ತೇವೆ. ನನ್ನ ಗಂಡನ ಎಡಎದೆ ಮೇಲೆ, ಎಡಗೈ ತೋರುಬೆರಳು, ಎಡಗೈ ಅಂಗೈ, ಮೊಣಕಾಲಿನ ಮೇಲೆ ಗಾಯಗಳಾಗಿದ್ದವು. ಸಾಕ್ಷಿಗೆ ಈಗ ಕಡತದಲ್ಲಿ ಇರುವ ಎರಡು ಪೋಟೋಗಳನ್ನು ತೋರಿಸಲಾಗಿದ್ದು, ಸಾಕ್ಷಿಯು ಅದರಲ್ಲಿ ತನ್ನ ಗಂಡನ ಶವವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಎರಡು ಪೋಟೋಗಳನ್ನು ಕ್ರಮವಾಗಿ ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ಶವವನ್ನು ಸ್ವೀಕರಿಸಿದ ಕುರಿತಾಗಿ ಇರುವ ರಸೀದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.4 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ಕಡತದಲ್ಲಿ ಇರುವ ಐದು ಪೋಟೋಗಳನ್ನು ನೋಡಿ ಗಲಾಟೆಯಾದ ಸ್ಥಳ ಮತ್ತು ಚಾಕು ಹಾಗೂ ಆರೋಪಿತರು ಬಿಟ್ಟು ಹೋಗಿರುವ ಬೈಕುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಐದು ಪೋಟೋಗಳನ್ನು ಕ್ರಮವಾಗಿ ನಿ.ಪಿ.5 ರಿಂದ 9 ಎಂದು ಗುರುತಿಸಲಾಯಿತು.

9. ದಿಃ 07-11-2024 ರಂದು ನನ್ನನ್ನು ಹೊನ್ನಾಳಿಯ ನ್ಯಾಯಾಲಯಕ್ಕೆ ಕರೆಯಿಸಲಾಗಿದ್ದು, ಅಲ್ಲಿ ನಾನು ನ್ಯಾಯಾಧೀಶರ ಎದುರು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯ ಮೂಲ ಪ್ರತಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಲಕೋಟೆಯನ್ನು ತೆರೆದು ನೋಡಲಾಗಿದ್ದು, ಅದರಲ್ಲಿ ಮೂಲ ಪ್ರತಿ ಇರುವುದು ಕಂಡುಬಂದಿರುತ್ತದೆ. ಸದರಿ ಲಕೋಟೆಯನ್ನು ನಿ.ಪಿ.10 ಎಂದು ಗುರುತಿಸಲಾಗಿದ್ದು, ಮೂಲ ಪ್ರತಿಯನ್ನು ಪುನಃ ನಿ.ಪಿ.10 ರಲ್ಲಿಯೇ ಇಡಲಾಗಿರುತ್ತದೆ. ಅಲ್ಲದೇ ನಾನು ಸದರಿ ದಿನ ಆರೋಪಿತರು ನಮ್ಮ ಊರಿಗೆ ಬಂದಂತಹ ಬೈಕುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಉಳಿದ ಬೈಕುಗಳನ್ನು ಕಡತದಲ್ಲಿ ಇರುವ ಎರಡು ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಎರಡು ಪೋಟೋಗಳನ್ನು ಕ್ರಮವಾಗಿ ನಿ.ಪಿ.11 ಮತ್ತು 12 ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಬಿಡಿಸಿಕೊಂಡು ಹೋಗಿರುವ ಬೈಕುಗಳ ಕುರಿತಾಗಿ ಆರೋಪಿತರ ಪರ ವಕೀಲರು ಗುರುತಿಸಲು ತಕರಾರು ಇಲ್ಲ ಎಂದು ನುಡಿದಿದ್ದು, ಅಲ್ಲದೇ ಉಳಿದ ಮೂರು ಬೈಕುಗಳು ಠಾಣಾ ಆವರಣದಲ್ಲಿಯೇ ಇದ್ದು, ಅವುಗಳಲ್ಲಿ ಕೆಎ-17-ಹೆಚ್ ಜೆ-4544 ನ್ನು ಮು.ಮಾ.1 ಎಂದು, ಕೆಎ-14-ಇಸಿ-7626 ನ್ನು ಮು.ಮಾ.2 ಎಂದು, ಕೆಎ-17-ಎಕ್ಸ್ -9051 ನ್ನು

ಮು.ಮಾ.3 ಎಂದು, ಕೆಎ-17-ಇಜೆ-9053 ನ್ನು ಮು.ಮಾ.4 ಎಂದು, ಕೆಎ-17-ಹೆಚ್ ಜೆ-4542 ನ್ನು ಮು.ಮಾ.5 ಎಂದು, ಕೆಎ-17-ಹೆಚ್ ಹೆಚ್-9143 ನ್ನು ಮು.ಮಾ.6 ಎಂದು, ಕೆಎ-17-ಇಎಕ್ಸ್ -9142 ನ್ನು ಮು.ಮಾ.7 ಎಂದು ಗುರುತಿಸಲಾಯಿತು.

10. ನನ್ನ ಗಂಡನಿಗೆ ಚುಚ್ಚಿದ ಚಾಕುವನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಬಟ್ಟೆಯ ಚೀಲವನ್ನು ಅರಗು ಸೀಲು ತೆರೆದು ಅದರಲ್ಲಿ ಇರುವ ಒಂದು ಚಾಕುವನ್ನು ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಚಾಕುವನ್ನು ಮು.ಮಾ.8 ಎಂದು, ಅದನ್ನು ಇಡಲಾದ ಬಟ್ಟೆಯ ಚೀಲವನ್ನು ಮು.ಮಾ.9 ಎಂದು ಗುರುತಿಸಲಾಯಿತು. ಸದರಿ ದಿನ ಘಟನೆಯ ಸಮಯದಲ್ಲಿ ನನ್ನ ಗಂಡ ನೀಲಿ ಮತ್ತು ಕಪ್ಪು ಬಣ್ಣದ ಗೆರೆಗಳು ಇರುವ ಪಂಚೆ, ಹಸಿರು ಪಾಚಿ ಶರ್ಟ್, ಕೊರಳಲ್ಲಿ ಕಪ್ಪು ದಾರ, ಅಲ್ಲದೇ ಅವರ ಬಲಗೈಯಲ್ಲಿ ಹಿತ್ತಾಳೆಯ ಬಳೆ ಇತ್ತು. ಅವುಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ.

11. ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಬಟ್ಟೆಯ ಚೀಲವನ್ನು ಅರಗು ಸೀಲು ತೆರೆದು ಅದರಲ್ಲಿ ಇರುವ ಒಂದು ಪಂಚೆಯನ್ನು ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಪಂಚೆಯನ್ನು ಮು.ಮಾ.10 ಎಂದು, ಅದನ್ನು ಇಡಲಾದ ಬಟ್ಟೆಯ ಚೀಲವನ್ನು ಮು.ಮಾ.11 ಎಂದು ಗುರುತಿಸಲಾಯಿತು.

12. ಅದೇ ರೀತಿ ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಬಟ್ಟೆಯ ಚೀಲವನ್ನು ಅರಗು ಸೀಲು ತೆರೆದು ಅದರಲ್ಲಿ ಇರುವ ಒಂದು ಅಂಡರ್ ವೇರ್ ನ್ನು ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅಂಡರ್ ವೇರನ್ನು ಮು.ಮಾ.12 ಎಂದು, ಅದನ್ನು ಇಡಲಾದ ಬಟ್ಟೆಯ ಚೀಲವನ್ನು ಮು.ಮಾ.13 ಎಂದು ಗುರುತಿಸಲಾಯಿತು.

13. ಆರೋಪಿತರು ಓಡಿ ಹೋಗುವಾಗ ಬಿಟ್ಟು ಹೋದ ಚಪ್ಪಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಬಟ್ಟೆಯ ಚೀಲವನ್ನು ಅರಗು ಸೀಲು ತೆರೆದು ಅದರಲ್ಲಿ ಒಂದು ಪ್ಲಾಸ್ಟಿಕ್ ಕವರಿನಲ್ಲಿ ಇರುವ ಒಂದು ಜೊತೆ ಚಪ್ಪಲಿಯನ್ನು ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಒಂದು ಜೊತೆ ಚಪ್ಪಲಿಯನ್ನು ಒಟ್ಟಾಗಿ ಮು.ಮಾ.14 ಎಂದು, ಅದನ್ನು ಇಡಲಾದ ಬಟ್ಟೆಯ ಚೀಲವನ್ನು ಮು.ಮಾ.15 ಎಂದು ಗುರುತಿಸಲಾಯಿತು. ಅಲ್ಲದೇ ಪ್ಲಾಸ್ಟಿಕ್ ಕವರನ್ನು ಮು.ಮಾ.16 ಎಂದು ಗುರುತಿಸಲಾಯಿತು. (ಈ ಹಂತದಲ್ಲಿ ಸಾಕ್ಷಿಯು ನುಡಿದಿರುವ ಹಸಿರು ಪಾಚಿ ಶರ್ಟ ಮುದ್ದೆಮಾಲುಗಳಲ್ಲಿ ಕಂಡುಬಂದಿರುವುದಿಲ್ಲ.) ಈ ಕುರಿತು ನಾನು ಪೋಲೀಸರಿಗೆ ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀಸವಾಲುಃ</u> 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದ.**

1. ಮರಿಗೊಂಡನಹಳ್ಳಿಯಲ್ಲಿ ಇರುವ ನಮ್ಮ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಮುಖವಾಗಿದೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ಅಂದರೆ ಪಶ್ಚಿಮ ದಿಕ್ಕಿನಲ್ಲಿ ನಾಗೇಶ, ಅವರ ಪಕ್ಕದಲ್ಲಿ ಹನುಮಂತಪ್ಪ, ಅದರ ಪಕ್ಕದಲ್ಲಿ ಹಾಲೇಶಿ, ಅದರ ಪಕ್ಕದಲ್ಲಿ ಹೊಟ್ಟೆ ರುದ್ರಪ್ಪ ಹಾಗೂ ಅದರ ಪಕ್ಕದಲ್ಲಿ ಹಾಲೇಶ ತಾಯಿ ಗಂಗಮ್ಮರವರ ಮನೆಗಳು ಇವೆ ಎಂದರೆ ಸರಿ. ಹಾಲೇಶ ತಾಯಿ ಗಂಗಮ್ಮರವರ ಮನೆಯ ಪಶ್ಚಿಮಕ್ಕೆ ಉತ್ತರ ದಕ್ಷಿಣವಾಗಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯ ಪಕ್ಕದಲ್ಲಿ ಪಶ್ಚಿಮಕ್ಕೆ ಎಕೆ ರುದ್ರಪ್ಪ ಹಾಗೂ ಅವರ ಮನೆಯ ಪಕ್ಕದಲ್ಲಿ ಗುತ್ಯಮ್ಮರವರ ಮನೆಗಳು ಇವೆ ಎಂದರೆ ಸರಿ. ಸದರಿ ಮೇಲೆ ಹೇಳಿದ ಎಲ್ಲಾ ಮನೆಗಳು ಅಂದಾಜು 40 ರಿಂದ 50 ಅಡಿ ಉತ್ತರ ದಕ್ಷಿಣವಾಗಿ ಉದ್ದವಿದೆ ಎಂದರೆ ಸರಿ. ಸದರಿ ಮೇಲೆ ಹೇಳಿದ ಎಲ್ಲಾ ಮನೆಯವರ ಹಿಂಬದಿ ನಾಲ್ಕು ಓಣಿ ಬಿಟ್ಟು ದೊಡ್ಡ ಹಾಲಪ್ಪರ ರುದ್ರಪ್ಪ ಎನ್ನುವವರ ಮನೆ ಬರುತ್ತದೆ ಎಂದರೆ ಸಾಕ್ಷಿಯು ಎರಡು ಓಣಿ ಬಿಟ್ಟು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಹಾಲೇಶಿ ತಾಯಿ ಗಂಗಮ್ಮರವರ ಮನೆಯಿಂದ ಸದರಿ ದೊಡ್ಡ ಹಾಲಪ್ಪರ ರುದ್ರಪ್ಪರವರ ಮನೆಗೆ 300 ರಿಂದ 400 ಮೀಟರ್ ಅಂತರವಿರುತ್ತದೆ ಎಂದರೆ ಸಾಕ್ಷಿಯು 40 ರಿಂದ 50 ಮೀಟರ್ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದೊಡ್ಡ ಹಾಲಪ್ಪರ ರುದ್ರಪ್ಪರ ಪಶ್ಚಿಮಕ್ಕೆ ಇರುವ ರಸ್ತೆಯ ನಂತರ ಪುಟ್ಟವ್ವರ ಬಸಪ್ಪನ ಮನೆ ಬರುತ್ತದೆ ಎಂದರೆ ಸರಿ. ಪುಟ್ಟವ್ವರ ಬಸಪ್ಪನ ಮನೆಯ ದಕ್ಷಿಣಕ್ಕೆ ರಸ್ತೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯ ದಕ್ಷಿಣಕ್ಕೆ ಇನ್ನೋರ್ವ ದೊಡ್ಡ ಹಾಲಪ್ಪರ ರುದ್ರಪ್ಪ ಎನ್ನುವವರ ಮನೆ ಬರುತ್ತದೆ ಎಂದರೆ ಸರಿ.

2. ನಮ್ಮ ಮನೆಯ ಪಕ್ಕದಲ್ಲಿ ಪಶ್ಚಿಮಕ್ಕೆ ಮೇಲೆ ಹೇಳಿದ ಮನೆಗಳು ಇರುವುದಲ್ಲದೇ, ಹಾಲೇಶ ತಾಯಿ ಗಂಗಮ್ಮ ಹಾಗೂ ರಸ್ತೆಯ ಆಚೆ ಇರುವ ಎಕೆ ರುದ್ರಪ್ಪರವರ ಮನೆಯ ನಡುವೆ ಒಂದು ವೃತ್ತ ಬರುತ್ತದೆ ಎಂದರೆ ಸರಿ. ಸದರಿ ಎಕೆ ರುದ್ರಪ್ಪ ಮತ್ತು ಗುತ್ಯಮ್ಮರವರ ಮನೆಯ ಎದುರುಗಡೆ ಕೆಂಚಮ್ಮನವರ ಕುಟುಂಬದವರ ಚಾಳು(ಕೇರಿ) ಇದೆ ಎಂದರೆ ಸರಿ. ಅಲ್ಲದೇ ಎಕೆ ರುದ್ರಪ್ಪ ಮತ್ತು ಗುತ್ಯಮ್ಮನವರ ಮನೆಯ ಮುಂದಿನ ಅಂಗಳ ಬಿಟ್ಟು ಪಶ್ಚಿಮಕ್ಕೆ ಮಾತೆಂಗಮ್ಮನ ದೇವಸ್ಥಾನ ಇದೆ ಎಂದರೆ ಸರಿ, ಅದು ಪೂರ್ವಕ್ಕೆ ಮುಖವಾಗಿದೆ ಎಂದರೆ ಸರಿ. ಸದರಿ ಮಾತೆಂಗಮ್ಮನ ದೇವಸ್ಥಾನದ ಪಶ್ಚಿಮಕ್ಕೆ ದೇವತಾ ಕಟ್ಟೆ (ಕರೆಬಾನಿ) ಇದೆ ಎಂದರೆ ಸರಿ. ಸದರಿ ಎಕೆ ರುದ್ರಪ್ಪ ಮತ್ತು ಗುತ್ಯಮ್ಮನವರ ಮನೆಯ ದಕ್ಷಿಣಕ್ಕೆ ಮಹೇಂದ್ರಪ್ಪನವರ ಪೆಟ್ಟಿಗೆ ಅಂಗಡಿ ಇದೆ ಎಂದರೆ ಸಾಕ್ಷಿಯು ಪೆಟ್ಟಿಗೆ ಅಂಗಡಿ ಇದೆ, ಆದರೆ ಅದು ಮಹೇಂದ್ರಪ್ಪನವರ ಪೆಟ್ಟಿಗೆ ಅಂಗಡಿ ಅಲ್ಲ, ಅದು ಸತೀಶ ಎನ್ನುವವರ ಪೆಟ್ಟಿಗೆ ಅಂಗಡಿ ಎಂದು ನುಡಿದಿರುತ್ತಾರೆ. ಸತೀಶ ಎಂದರೆ ಮಹೇಂದ್ರಪ್ಪನವರ ಮಗ ಎಂದರೆ ಸರಿ.

3. ನಮ್ಮ ಮನೆಯ ಪೂರ್ವಕ್ಕೆ ಹೊಸಮನೆ ಶೇಖರಪ್ಪರವರ ಮನೆ ಇದೆ ಎಂದರೆ ಸರಿ. ಅದರ ಪೂರ್ವಕ್ಕೆ ಸುಧಾ ಗಂಡ ಮಂಜಪ್ಪರವರ ಮನೆ ಇದೆ ಎಂದರೆ ಸರಿ. ಸದರಿ ಮನೆಗಳ ಎದುರಿಗೆ ರಸ್ತೆ ದಾಟಿದರೆ ದಕ್ಷಿಣಕ್ಕೆ ಮುಖವಾಗಿ ಶೇಖರಪ್ಪ, ಜಯಪ್ಪ, ಕನ್ನಪ್ಪ, ರುದ್ರಪ್ಪ ತಳವಾರರವರ ಮನೆಗಳು ಇರುತ್ತವೆ ಎಂದರೆ ಸರಿ. ಹಾಗಾಗಿ ನಮ್ಮ ಮನೆ ಇರುವ ಸ್ಥಳ ಜನನಿಭಿಡ ಪ್ರದೇಶ ಎಂದರೆ ಸರಿ.

4. ಆರೋಪಿತರು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಮ್ಮ ಮನೆಗೆ ಹೊಕ್ಕಿ ನನ್ನ ಗಂಡನಿಗೆ ಹಲ್ಲೆ ಮಾಡುವಾಗ ನಾನು ನನ್ನ ಗಂಡನನ್ನು ರಕ್ಷಿಸಿರಿ ಎಂದು ಸಹಾಯಕ್ಕಾಗಿ ಕಿರುಚಾಡಿರುತ್ತೇನೆ. ನಮ್ಮ ಮನೆಗೆ ಆರೋಪಿತರು ಅಕ್ರಮ ಪ್ರವೇಶ ಮಾಡಿ ನನ್ನ ಗಂಡನಿಗೆ ಹಲ್ಲೆ ಮಾಡಿ ಹೊರಗಡೆ ಎಳೆಯುವ ಸಂದರ್ಭದಲ್ಲಿ ಸಹಾಯಕ್ಕಾಗಿ ಯಾವುದೇ ಜನರು ಬಂದದ್ದು ಇರುವುದಿಲ್ಲ. ಸದರಿ ವೃತ್ತದ ಬಳಿ ಇರುವ ಮಾತೆಂಗಮ್ಮನ ದೇವಸ್ಥಾನದಲ್ಲಿ ನಮ್ಮ ಊರಿನ ಜನರು ಪ್ರತಿನಿತ್ಯ ಪೂಜೆ ಪುನಸ್ಕಾರ ಮಾಡುವ ಕುರಿತು ಅಲ್ಲಿ ನೆರೆದಿರುತ್ತಾರೆ ಎಂದರೆ ಸರಿ.

5. ನಾನು ಪಿಯುಸಿವರೆಗೆ ವ್ಯಾಸಂಗ ಮಾಡಿರುತ್ತೇನೆ. ದೂರು ನನ್ನ ಕೈಬರಹದಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ನಾನು ಹೇಳಿದ ರೀತಿಯಲ್ಲಿ ಬರೆದಿದ್ದಾರೆ ಎಂದು ನುಡಿದಿರುತ್ತಾರೆ. ದೂರು ಯಾರ ಕೈಬರಹದಲ್ಲಿ ಇದೆಯೋ ಅವರೇ ಚೈತ್ರ ಎಂದು ಬರೆದಿದ್ದಾರೆ ಎಂದರೆ ಸರಿ. (ಈ ಹಂತದಲ್ಲಿ ನ್ಯಾಯಾಲಯವು ನಿ.ಪಿ.1ನ್ನು ಗಮನಿಸಿದಾಗ ಸಹಿ ಮಾಡಿದ ಸ್ಥಳದಲ್ಲಿ ಎರಡು ಚೈತ್ರ ಎಂದು ಬರೆಯಲಾಗಿದ್ದು, ಮೇಲುಗಡೆಯ ಚೈತ್ರ ನಿ.ಪಿ.1 ಬರೆದವರು ಬರೆದಿದ್ದಾರೆ ಎಂದು ಸಾಕ್ಷಿ ನುಡಿದಿರುವುದನ್ನು ಗಮನಿಸಲಾಗಿರುತ್ತದೆ.) ನಿ.ಪಿ.1(ಎ) ಸಹಿಯನ್ನು ನ್ಯಾಮತಿ ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಿ ಅಲ್ಲಿ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿ. ನಿ.ಪಿ.1 ರಲ್ಲಿ ಇರುವ ಸಹಿ ಮಾಡುವ ಸ್ಥಳದಲ್ಲಿನ ಮೇಲುಗಡೆಯ ಸಹಿ ನನ್ನ ಸಹಿ ಎನ್ನುವ ಕುರಿತಾಗಿ ಪೋಲೀಸರು ಸಂಶಯ ಪಟ್ಟ ಕಾರಣ ಪುನಃ ನನ್ನನ್ನು ಕರೆಯಿಸಿ ಅದರ ಕೆಳಗಡೆ ಸಹಿ ಪಡೆದಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿ.ಪಿ.1ನ್ನು ಠಾಣೆಯಲ್ಲಿಯೇ ಬರೆದು ಸಹಿ ಪಡೆದಿದ್ದಾರೆ ಎಂದು ನುಡಿದಿರುತ್ತಾರೆ. ನಿ.ಪಿ.1 ರ ಎರಡನೇ ಪುಟದಲ್ಲಿ ಅಲ್ಲಲ್ಲಿ ವೈಟ್ನರನ್ನು ಹಚ್ಚಿ ತಿದ್ದಿರುವುದು ಕಂಡುಬರುತ್ತದೆ,ಅದನ್ನು ಯಾವಾಗ ವೈಟ್ನರನ್ನು ಹಚ್ಚಿ ತಿದ್ದುಪಡಿ ಮಾಡಿದ್ದಾರೆ ಎಂದು ನಿನಗೆ ತಿಳಿದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಹೇಳಿಕೆ ಕೊಡುವಾಗ ಅಲ್ಲಲ್ಲಿ ತಪ್ಪು ಹೇಳಿದ್ದು, ಆ ಕಾರಣ ವೈಟ್ನರ್ ಹಚ್ಚಿ ತಿದ್ದುಪಡಿ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಅಲ್ಲಿ ಪೋಲೀಸರು ಇದ್ದರು, ಆದರೆ ನನಗೆ ಅವರ ಹೆಸರು ಮತ್ತು ಹುದ್ದೆ ತಿಳಿದಿರುವುದಿಲ್ಲ. ನಾನು ನನ್ನ ಬಾಯಿಯಲ್ಲಿ ಹೇಳುತ್ತ ಇರುವಾಗ ಪೋಲೀಸರು ಬರೆದುಕೊಂಡ ಬರಹ ನಿ.ಪಿ.1 ಅಲ್ಲ ಎಂದರೆ ಸರಿ. ನಿ.ಪಿ.1ಕ್ಕೆ ನನ್ನ ಸಹಿಯನ್ನು ಪೋಲೀಸರು ಪಡೆಯುವಾಗ ಅದನ್ನು ಯಾರಿಂದ ಬರೆಯಿಸಿದ್ದೀರಿ ಎಂದು ನನ್ನನ್ನು ಪೋಲೀಸರು ವಿಚಾರಿಸಿರುತ್ತಾರೆ. ವೈಟ್ನರ್ ಹಚ್ಚಿ ತಿದ್ದುಪಡಿ ಮಾಡಿದ ಸ್ಥಳಗಳಲ್ಲಿ ನನ್ನ ಚಿಕ್ಕ ರುಜುವನ್ನು ಪೋಲೀಸರು ಮಾಡು ಎಂದು ಹೇಳಿದ್ದು ಇರುವುದಿಲ್ಲ. ನಿ.ಪಿ.1ಕ್ಕೆ ನನ್ನ ಸಹಿ ಪಡೆಯುವ ಪೂರ್ವದಲ್ಲಿ ಪೋಲೀಸರು ಅದನ್ನು ಓದಿಸಿ ಸಹಿ ಪಡೆದುಕೊಂಡಿರುತ್ತಾರೆ.

6. ನಿ.ಪಿ.1 ದೂರಿನ ಎರಡನೇ ಪುಟದ ನಾಲ್ಕನೇ ಲೈನಿನಲ್ಲಿ ಬರೆಯಿಸಿದ **"ಶಿವರಾಜ್ ಬಿನ್ ಶೇಖರಪ್ಪ"** ನನ್ನ ಗಂಡನ ಸಂಪೂರ್ಣ ಹೆಸರು ಅಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನ್ನ ಗಂಡನ ಸಂಪೂರ್ಣ ಹೆಸರು ಶಿವರಾಜ್ ಬಿನ್ ತೀರ್ಥಪ್ಪ ಆಗಿದ್ದು, ಬರೆಯುವಾಗ ತಪ್ಪು ಬರೆಯಲಾಗಿದ್ದು, ಅದಕ್ಕೆ ವೈಟ್ನರ್ ಹಚ್ಚಲು

ಮರೆತಿದ್ದೇನೆ ಎಂದು ನುಡಿದಿರುತ್ತಾರೆ. ಈ ರೀತಿಯ ತಪ್ಪುಗಳು ನನ್ನ ಗಮನಕ್ಕೆ ಯಾಕೆ ಬರಲಿಲ್ಲ ಎಂದರೆ ನಿ.ಪಿ.1(ಎ) ಸಹಿ ಮಾಡುವ ಪೂರ್ವದಲ್ಲಿ ನನಗೆ ನಿ.ಪಿ.1 ನ್ನು ಓದಿ ಹೇಳಿಸಿರಲಿಲ್ಲ ಎಂದರೆ ಸಾಕ್ಷಿಯು ಓದಿಸಿದ್ದಾರೆ, ಆದರೆ ಆ ಸಮಯದಲ್ಲಿ ನಾನು ಅದನ್ನು ಗ್ರಹಿಸಿರಲಿಲ್ಲ ಎಂದು ನುಡಿದಿರುತ್ತಾರೆ. ನಿ.ಪಿ.1 ರ ಎರಡನೇ ಪುಟದ ಕೆಳಗಿನಿಂದ 8 ನೇ ಲೈನಿನಲ್ಲಿ ನಾಲ್ಕು ಸಾಕ್ಷಿದಾರರ ಹೆಸರು ಬರೆದಾದ ಬಳಿಕ ಇನ್ನೋರ್ವ ಸಾಕ್ಷಿದಾರನ ಹೆಸರು ಬರೆದು ನಂತರ ಅದಕ್ಕೆ ವೈಟ್ನರ್ ಹಾಕಲಾಗಿದ್ದು, ಯಾವುದೇ ತಿದ್ದುಪಡಿ ಕೂಡ ಮಾಡಿರುವುದು ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು, ಆಗ ನಾಲ್ವರೇ ಸಾಕ್ಷಿದಾರರ ಬಗ್ಗೆ ಹೇಳಿದ್ದು, ಅಲ್ಲಿ ಯಾವುದೋ ತಪ್ಪು ಶಬ್ದ ಬರೆಯಲಾಗಿದ್ದು, ನಂತರ 4 ನೇ ಸಾಕ್ಷಿದಾರನ ಹೆಸರು ಮುಂದಕ್ಕೆ ಬರೆಯಲಾಗಿದೆ ಎಂದು ನುಡಿದಿರುತ್ತಾರೆ. ನಿ.ಪಿ.1 ನ್ನು ಯಾರು ಬರೆದಿದ್ದಾರೆ ಎಂದು ಆ ಸಮಯದಲ್ಲಿ ನನ್ನ ಬಳಿ ಪೋಲೀಸರು ಕೇಳಿರುವುದಿಲ್ಲ. ನಿ.ಪಿ.1 ಕ್ಕೆ ನಾನು ಸಹಿ ಮಾಡುವಾಗ ಸದರಿ ನಿ.ಪಿ.1 ನ್ನು ಬರೆದವರು ಪೋಲೀಸರ ಸಮಕ್ಷಮದಲ್ಲಿ ಇದ್ದರು. ನಿ.ಪಿ.1 ನ್ನು ಬರೆದವರ ಹೆಸರು ಅಶೋಕ ಎಂದು ಆಗಿರುತ್ತದೆ. ನಿ.ಪಿ.1 ಕ್ಕೆ ಅಶೋಕನ ಸಹಿಯನ್ನು ಪೋಲೀಸರು ಪಡೆದುಕೊಂಡಿದ್ದು ಇರುವುದಿಲ್ಲ.

7. ನಿ.ಪಿ.1 ನ್ನು ಪೋಲೀಸರು ಹಾಗೂ ದಲಿತ ಸಂಘದ ಸಂಚಾಲಕ ಗುರುಮೂರ್ತಿ ಎನ್ನುವವರು ಸೇರಿಕೊಂಡು ತಯಾರಿಸಿದ್ದಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಮ್ಮ ಸಹಾಯಕ್ಕೆ ಸದರಿ ಗುರುಮೂರ್ತಿ ಇದ್ದರು, ಆದರೆ ನಿ.ಪಿ.1 ನ್ನು ನಾನು ಹೇಳಿದಂತೆ ಅಶೋಕ ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಗುರುಮೂರ್ತಿ ಎನ್ನುವವರು ಆ ಸಮಯದಲ್ಲಿ ದಲಿತ ಸಂಘದ ರಾಜ್ಯಾಧ್ಯಕ್ಷರು ಕೂಡ ಆಗಿದ್ದರು ಎಂದರೆ ಸರಿ. ನಿ.ಪಿ.1 ನ್ನು ನನ್ನ ಮಾಹಿತಿ ಇಲ್ಲದೇ ಸದರಿ ಗುರುಮೂರ್ತಿ ಅವರು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಚಾ.ಸಾ.13 ರಿಂದ 17 ರವರು ಸದರಿ ಗುರುಮೂರ್ತಿಯವರ ಅನುಯಾಯಿಗಳು ಎಂದರೆ ಸರಿಯಲ್ಲ.

8. 1 ನೇ ಆರೋಪಿಯು ಚಿ. ಕಡದಕಟ್ಟೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದು, ಈಗ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ಚಿ.ಕಡದಕಟ್ಟೆ ಗ್ರಾಮ ಪಂಚಾಯಿತಿಯವರು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು, ಕಂದಾಯ ಅಧಿಕಾರಿಗಳು ಹಾಗೂ ಪೋಲೀಸರು ಸೇರಿಕೊಂಡು ನಮ್ಮ ಊರಿನಲ್ಲಿ ಅಕ್ರಮ ಮರಳುಗಾರಿಕೆ ತಡೆದಿದ್ದರು ಎಂದರೆ ಸಾಕ್ಷಿಯು 1 ನೇ ಆರೋಪಿ ಆ ರೀತಿ ತಡೆದಿಲ್ಲ, ಭೂ ಮತ್ತು ಗಣಿ ವಿಜ್ಞಾನ ಇಲಾಖೆಯವರು ಬಂದು ತಡೆದಿದ್ದರು ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿರುವ ಕಾರಣ ಪಾಟೀಸವಾಲನ್ನು ನಾಳೆಗೆ ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.